

# ಕಲಾಲೋಕದ ಮೈಸೂರ ಮಲ್ಲಿಗೆ

■ ಮಹತಿ

ಕನ್ನಡ ಕಲಾಲೋಕದ ಮಟ್ಟಿಗೆ ಕಮಲೇಶ್ (ನಿಧನ: ಜುಲೈ 1, 2014) ಏಕಾಮೇವಾದ್ವಿತೀಯರು. ರೇಖಾಚಿತ್ರಗಳ ಗಾರುಡಿಗ ಕೆ.ಕೆ. ಹೆಬ್ಬಾರರನ್ನು ಮರೆಯುವಂತಿಲ್ಲವಾದರೂ, ಕಮಲೇಶ್ ಸಾಧಿಸಿದ ಎತ್ತರಗಳು ಬೇರೆಯೇ ಸ್ತರದವು. ಅವರ ರೇಖೆಗಳಲ್ಲಿ ಮಾಂತ್ರಿಕತೆಗಿಂತಲೂ ಸಹಜವಾಗಿ ಜೀವಂತಿಕೆ ಇರುತ್ತಿತ್ತು. ಜನಸಾಮಾನ್ಯರನ್ನು ಕೂಡ ಹಿಡಿದಿಡಬಲ್ಲ ಶಕ್ತಿ ಅವರ ರೇಖೆಗಳದು. ಮಾಧ್ಯಮಗಳ ಪ್ರಭೆಯಿಂದ ದೂರವೇ ಉಳಿದಂತಿದ್ದ ಅವರು, ತಮ್ಮ ರೇಖಾಚಿತ್ರಗಳ ಮೂಲಕ ಕರ್ನಾಟಕದ ಸಾಂಸ್ಕೃತಿಕ ಏಕೀಕರಣವೊಂದನ್ನು ಸಾಧಿಸಿದ್ದರು.



ಕಮಲೇಶ್ ಅವರ ಕಲಾಕೃತಿ

ಕಮಲೇಶ್ ಮೈಸೂರಿನವರು. ಅವರ ತಂದೆ ಕೆ.ಎಸ್. ಚಂದ್ರಶೇಖರಯ್ಯನವರು ಮೈಸೂರಿನ ‘ವೆಸ್ಲೀ ಪ್ರೆಸ್’ನಲ್ಲಿ ಬೈಂಡರ್ ಆಗಿ ಕೆಲಸ ಮಾಡುತ್ತಿದ್ದರು. ಅಪ್ಪ ದುಡಿಯುತ್ತಿದ್ದ ಮುದ್ರಣಾಲಯದ ಮೂಲಕವೇ ಬಾಲಕ ಕಮಲೇಶ್‌ಗೆ ಪುಸ್ತಕಪ್ರೀತಿ ಶುರುವಾಯಿತು. ಓದು, ಅದರ ಮೂಲಕ ನೋಟದ ಗ್ರಹಿಕೆಗಳನ್ನು ರೂಢಿಸಿಕೊಳ್ಳುತ್ತಾ ಹೋದ ಅವರು, ಚಿತ್ರ ಬರೆಯುವುದರಲ್ಲಿ ಸುಖವಿದೆ ಎನ್ನುವುದನ್ನು ಎಳೆಯ ವಯಸ್ಸಿನಲ್ಲೇ ಕಂಡುಕೊಂಡರು. ಹತ್ತನೇ ತರಗತಿಯ ನಂತರ ಚಾಮರಾಜೇಂದ್ರ ತಾಂತ್ರಿಕ ವಿದ್ಯಾಲಯದಲ್ಲಿ ಚಿತ್ರಕಲೆಯ ತರಗತಿಗಳಿಗೆ ಸೇರಿಕೊಂಡರು. ಚಿತ್ರಕಲೆಯ ಪಟ್ಟುಗಳು ಅವರಿಗೆ ಕರಗತ, ಮನೋಗತ ಆದುದು ಅಲ್ಲಿಯೇ.

ಕಲಾಭ್ಯಾಸದ ನಂತರ ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಕಲಾವಿದನಾಗಿ ಸೇರ್ಪಡೆಗೊಂಡರು. ಪ್ರಾಚ್ಯವಸ್ತು ಕಲೆಯಲ್ಲೂ ಅವರ ಆಸಕ್ತಿ ಮೊಳೆಯಿತು. ಡಾ. ಎಂ. ಶೇಷಾದ್ರಿ ಅವರು ರಾಜ್ಯ ಪುರಾತತ್ವ ಇಲಾಖೆಯ ನಿರ್ದೇಶಕರಾಗಿದ್ದ ಅವಧಿಯಲ್ಲಿ ಕಮಲೇಶ್‌ರ ಸೃಜನಶೀಲತೆ ಹಲವು ರೂಪಗಳಲ್ಲಿ ಅಭಿವ್ಯಕ್ತಗೊಂಡಿತು. ಕಿತ್ತೂರಿನಲ್ಲಿ ವಸ್ತು ಸಂಗ್ರಹಾಲಯ ರೂಪುಗೊಂಡಿದ್ದು, ಬೆಂಗಳೂರಿನ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಹೊಸ ಗ್ಯಾಲರಿಗಳ ಆರಂಭ– ಇಲ್ಲೆಲ್ಲ ಕಮಲೇಶ್‌ರ ಕ್ರಿಯಾಶೀಲತೆಯ ರುಜು ಕಾಣಬಹುದು.

ಕರ್ನಾಟಕದ ಪಾರಂಪರಿಕ ಕಟ್ಟಡಗಳನ್ನು ರೇಖಾಚಿತ್ರಗಳಲ್ಲಿ ದಾಖಲಿಸಿದ್ದು ಕಮಲೇಶ್‌ರ ಪ್ರಮುಖ ಸಾಧನೆಗಳಲ್ಲೊಂದು. ಕರ್ನಾಟಕ ಸರ್ಕಾರಕ್ಕಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳನ್ನು ಅವರು ರೇಖೆಗಳಲ್ಲಿ ಬಿಡಿಸಿದರು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಪಾರಂಪರಿಕ ರೇಖಾಚಿತ್ರಗಳನ್ನು ಬಿಡಿಸಿದ ಮತ್ತೊಬ್ಬ ಕಲಾವಿದನನ್ನು ಆಧುನಿಕ ಸಂದರ್ಭದಲ್ಲಿ ಕಾಣುವುದು ಕಷ್ಟ.

ಕಮಲೇಶ್ ಅವರು ಚಿತ್ರ ಬಿಡಿಸುತ್ತಿದ್ದ ರೀತಿ ಕೂಡ ವಿಶಿಷ್ಟ. ಅವರ ಬಳಿ ಒಂದು ಪೆನ್ ಹಾಗೂ ಸ್ಕೆಚ್‌ಬುಕ್ ಸದಾ ಇರುತ್ತಿತ್ತು. ಯಾವುದಾದರೂ ಕಟ್ಟಡ ತಮ್ಮ ಗಮನ ಸೆಳೆದರೆ, ಅದರ ಮುಂದೆ ಕಮಲೇಶ್ ಕುಳಿತುಬಿಡುತ್ತಿದ್ದರು. ಮತ್ತೆ ಅವರು ಮೇಲೇಳುತ್ತಿದ್ದುದು ಕಲಾಕೃತಿ ಮುಗಿದ ಮೇಲೆಯೇ. ಅಳಿಸುವುದು, ತಿದ್ದುವುದು, ಪೆನ್ಸಿಲ್ ಕರಡು ಬಿಡಿಸುವುದು ಅವರ ಜಾಯಮಾನ ಆಗಿರಲಿಲ್ಲ. ಒಮ್ಮೆ ಬರೆದರೆಂದರೆ ಅದು ಫೈನಲ್! ಅವರ ಪಾಲಿಗೆ ಒಲಿದದ್ದೆಲ್ಲವೂ ಅಳಿಸಲಾಗದ ರೇಖೆಗಳೇ.

ಹಿಂದೂಸ್ತಾನಿ ಸಂಗೀತದಲ್ಲಿ ಕೂಡ ಕಮಲೇಶರಿಗೆ ಒಲವಿತ್ತು, ಪರಿಣತಿಯಿತ್ತು. ವಿಶಿಷ್ಟ ಕನ್ನಡ ಅಕ್ಷರಗಳನ್ನು ವಿನ್ಯಾಸಗೊಳಿಸಿದ ಅಗ್ಗಳಿಕೆಯೂ ಅವರಿಗೆ ಸಲ್ಲುತ್ತದೆ. ‘ಪ್ರಜಾವಾಣಿ’ಯ ಫ್ಯಾಂಟಮ್ ಕಾಮಿಕ್ಸ್‌ನಲ್ಲಿನ ಸಂಭಾಷಣೆಗಳು ಮೂಡುತ್ತಿದ್ದುದು ಅವರ ಅಕ್ಷರಗಳಲ್ಲೇ.